# ಯುವಜನರು ಗಾಂಧಿಯೊಂದಿಗೆ ಏಕೆ ತೊಡಗಿಸಿಕೊಳ್ಳಬೇಕು?

ಹಿಂಸೆಯನ್ನು ಪುಷ್ಟೀಕರಿಸಿ ಅದನ್ನೊಂದು ಸಾಮಾನ್ಯ ಸಂಗತಿಯನ್ನಾಗಿಸಿರುವ ಜಗತ್ತಿನಲ್ಲಿ, ಸಮೂಹ ಉದ್ಧಾರಕ್ಕಾಗಿ ಪ್ರಯತ್ನಿಸುವ ಯಾರೇ ಆಗಲಿ, ಗಾಂಧಿಯತ್ತ ಗಮನಹರಿಸಬೇಕು.

ಕೆಲವೊಂದು ಸಲ ನನಗೆ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಅವರು ಕೇವಲ 'ಯಶಸ್ವಿ' ಆಗಿದ್ದ ಕಾರಣಕ್ಕೆ ಗಮನಾರ್ಹರಾಗಿದ್ದರು ಎನ್ನಿಸುವುದಿಲ್ಲ. ಬದಲಾಗಿ ಅವರು ಹಿಂಸೆಯ ಯುಗದಲ್ಲಿ ಅಹಿಂಸೆ; ಅಧಿಕಾರಶಾಹಿಯ 'ಕಬ್ಬಿಣದ ಪಂಜರ' ಮತ್ತು ತಂತ್ರಜ್ಞರ ಆಡಳಿತದ ಮೂಲಕ ಮನುಷ್ಯರನ್ನು ಮಾನವೀಯತೆಯಿಂದ ದೂರಗೊಳಿಸುವುದನ್ನು ಸಮರ್ಥಿಸಿಕೊಂಡು ಅಮಾನವೀಯತೆಯನ್ನು ಸಾಮಾನ್ಯಗೊಳಿಸಿದ್ದ ಯುಗದಲ್ಲಿ ಸ್ವಾವಲಂಬನೆ; ಆಧುನಿಕತೆಯು ಕೇವಲ 'ಬಾಹ್ಯ' ಪ್ರಪಂಚವನ್ನಷ್ಟೇ ಜಯಿಸಲು ಯತ್ನಿಸುತ್ತಿದ್ದ ಕಾಲಘಟ್ಟದಲ್ಲಿ ಆತ್ಮಾವಲೋಕನ - ಇಂತಹ 'ಅಸಾಧ್ಯ'ವೆನ್ನಿಸುವುದನ್ನು ಸಾಧಿಸಲು ತೆಗೆದುಕೊಂಡ ಶ್ರಮದಲ್ಲಿ ಅವರ ಸೊಗಸು ಅಡಗಿದೆ ಎಂದು ಎನ್ನಿಸುತ್ತದೆ.

ಹಾಗಾಗಿ, ಅವರು 'ಸೋತರು' ಎಂದು ಬಹಳ ಸಲ ಹೇಳುವುದರಲ್ಲಿ ಆಶ್ಚರ್ಯವೇನಿಲ್ಲ. ಮತ್ತು ಪ್ರಾಯಶಃ, ಜನವರಿ 30, 1948ರಂದು ನಾಥುರಾಮ್ ಗೋಡ್ಸೆಯೂ ಗಾಂಧಿಯವರ 'ಸೋಲುಗಳು' ಅಕ್ಷಮ್ಯವೆಂದೂ, ಅವರನ್ನು ಅರ್ಥಮಾಡಿಕೊಳ್ಳುವ ಬದಲು ಕೊಂದುಬಿಡುವುದೇ ಸರಿಯೆಂಬ ಸಂದೇಶವನ್ನು ರವಾನಿಸಿದ್ದ.

ಗೋಡ್ಸೆಯ ರಾಜಕಾರಣದ ಬಗ್ಗೆ ಕಿಂಚಿತ್ತೂ ಒಲವಿಲ್ಲದ ನಮ್ಮಲ್ಲಿನ ಬಹಳ ಜನರಲ್ಲಿ ಗೋಡ್ಸೆಯ ಒಂದು ಅಂಶವಿದೆಯೇ? 'ಗಾಂಧಿ ಹೀಗಳಿಕೆ' ಎಂದು ನಾನು ಪರಿಗಣಿಸುವ ಒಂದು ಕ್ರಿಯೆಯಲ್ಲಿನ ನಮ್ಮ ತೊಡಗಿಸಿಕೊಳ್ಳುವಿಕೆಯ ಬಗ್ಗೆ ಕೊಂಚ ಯೋಚಿಸಿ. ಹೌದು, ಆಧುನಿಕತಾವಾದಿಗಳು (ನನ್ನನ್ನು ನಂಬಿ, ಗಾಂಧಿಯವರ ಅತಿ ಹತ್ತಿರದ ಶಿಷ್ಯರೆಂದೇ ಪರಿಗಣಿತರಾಗಿದ್ದ ಜವಾಹರ್‌ಲಾಲ್ ನೆಹರು ಅವರನ್ನೂ ಸಹ ಸೇರಿಸುತ್ತಿದ್ದೇನೆ) ಮಹಾತ್ಮ ಗಾಂಧಿಯವರು ಗಮನಾರ್ಹವಾಗಿ ಸರಳವೆನಿಸಿದರೂ, ಬಹಳಷ್ಟನ್ನು ಹೊರಗೆಡಹುವ ತಮ್ಮ ಕೃತಿ *ಹಿಂದ್ ಸ್ವರಾಜ್‌ನಲ್ಲಿ* ವ್ಯಕ್ತಪಡಿಸಿರುವ ವಸಾಹತೀಕರಣದಿಂದ ಹೊರಬರುವ ಮಾರ್ಗಸೂಚಿಯ ಬಗ್ಗೆ ಒಂದು ರೀತಿಯ ಕಸಿವಿಸಿಯನ್ನು ಅನುಭವಿಸುತ್ತಿದ್ದರು.

ಜಾತಿ ಪ್ರಜ್ಞೆಯ ಬೀಜಗಳನ್ನು ಹೋಗಲಾಡಿಸುವಲ್ಲಿ ಗಾಂಧಿ ಯಾವುದೇ ಪಾತ್ರವನ್ನು ವಹಿಸಿದರೆಂಬುದನ್ನು ಅಂಬೇಡ್ಕರ್‌ವಾದಿಗಳು ಒಪ್ಪಲು ತಯಾರಿರಲಿಲ್ಲ. ಸರಳೀಕರಣವಾದಿಗಳಾದ ಮಾರ್ಕ್ಸ್‌ವಾದಿಗಳು ಗಾಂಧಿಯವರ 'ಅಹಿಂಸಾತ್ಮಕ ಸಮಾಜವಾದ' ಅಥವಾ *ಸತ್ಯಾಗ್ರಹದ* ಕಲ್ಪನೆಯನ್ನು ಹಾಸ್ಯ ಮಾಡುತ್ತಿದ್ದರು.

ನಮ್ಮ ಇತಿಹಾಸದಲ್ಲಿ ಉಂಟಾದ ಎಲ್ಲ ಅಹಿತಕರ ಘಟನೆಗಳಿಗೂ ಕಾರಣಕರ್ತರಾದ ಮಧ್ಯಯುಗದ, ಮೃದುಗಾಮಿ ಹಿಂದು, ಜಾತಿವಾದಿ, ಪಿತೃಪ್ರಧಾನವಾದಿ ಗಾಂಧಿ : 'ದೂಷಿತ' ಗಾಂಧಿಯ ಈ ಕಲ್ಪನಾಚಿತ್ರ ನಮ್ಮ ಪ್ರಜ್ಞೆಯನ್ನು ಎಷ್ಟು ಸಲ ಆಕ್ರಮಿಸುತ್ತದೆ?

ಗೋಡ್ಸೆ ಗಾಂಧಿಯನ್ನು ದೈಹಿಕವಾಗಿ ಕೊಂದ, ಆದರೆ ನಮ್ಮಲ್ಲಿ ಹಲವರು ಅವರ ಚೇತನವನ್ನು ಸಹಾನುಭೂತಿ ಇರದ ಇಂಥ ಸತತವಾದ ದೂಷಣೆಯಿಂದ ಕೊಲ್ಲಲು ಬಯಸಿದೆವು.

ಹಾಗಾಗಿ, ರಾಜಕೀಯ ಸುಧಾರಣಾವಾದಿಗಳಾದರೂ ಗಾಂಧಿಯ ಬಗ್ಗೆ ಉತ್ಸಾಹ ತೋರಿ, ಅವರ ಚಿಂತನೆಗಳೊಡನೆ ಆಳವಾಗಿ, ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ಕಾತುರರಾದ ಯುವಜನರು ಸುಲಭಕ್ಕೆ ಸಿಗುವುದಿಲ್ಲ ಎಂಬುದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ. ಇದು ಬದಲಾಗಬೇಕೆಂದು ನನಗೆ ಅನಿಸುತ್ತದೆ.

ಈ ಲೇಖನದಲ್ಲಿ, ವಿಶೇಷವಾಗಿ ಯುವಜನರು ಗಾಂಧಿಯವರ ಚಿಂತನೆಯೊಡನೆ ಕೊಂಚ ಗಂಭೀರವಾಗಿ ತೊಡಗಿಸಿಕೊಳ್ಳುವುದು ಏಕೆ ಮುಖ್ಯವೆಂದು ನಾನು ವಾದಿಸುತ್ತೇನೆ.

## ನಮ್ಮ ಕಾಲಮಾನ ಮತ್ತು ಮೂರು ಸಮಂಜಸವಾದ ಪ್ರಶ್ನೆಗಳು

ಪ್ರಾರಂಭದಲ್ಲಿ,, ನಾವಿರುವ ಕಾಲಮಾನದಲ್ಲಿ ಬದುಕುವ ಕ್ರಿಯೆ ಮಾತ್ರದಿಂದ ಹುಟ್ಟುವ ಮೂರು ಪ್ರಶ್ನೆಗಳನ್ನು ಎತ್ತಬಯಸುತ್ತೇನೆ. ಮೊದಲಿಗೆ, ಮಾರುಕಟ್ಟೆ ಆಧಾರಿತ ನವಉದಾರವಾದಿ ಜಾಗತಿಕ ಬಂಡವಾಳಶಾಹಿ ಚರ್ಚೆಯ ಬಗ್ಗೆ ಯೋಚಿಸಿ – ಅದರಲ್ಲಿ ಸೂಚ್ಯವಾಗಿರುವ ಸಾಮಾಜಿಕ ಡಾರ್ವಿನಿಸಮ್ ಹಾಗೂ ಲಂಗು ಲಗಾಮಿಲ್ಲದ ಸ್ಪರ್ಧೆ, ಮತ್ತು ಅದು ರೂಪಿಸುವ ಪ್ರೀತಿ, ಕಾಳಜಿ ಮತ್ತು ನ್ಯಾಯದ ನೈತಿಕತೆಗಳಿಂದ ಬೇರ್ಪಟ್ಟ ಚಡಪಡಿಸುವ ಚಂಚಲ ಗ್ರಾಹಕನಂತಹ ಸ್ವ-ಸ್ವಾಮ್ಯವುಳ್ಳ ವ್ಯಕ್ತಿ, ಇದೆಲ್ಲವನ್ನು ಕಲ್ಪಿಸಿಕೊಳ್ಳಿ.

ಎರಡನೆಯದಾಗಿ, ಧರ್ಮವನ್ನು ಸಾಮೂಹಿಕ ಸ್ವರತಿಯ ಒಂದು ಸಿದ್ಧಾಂತವನ್ನಾಗಿ ಪರಿವರ್ತಿಸಿ, ನಂಬಿಕೆ, ಜೀವನಶೈಲಿಗಳು ಮತ್ತು ಸಾಂಸ್ಕೃತಿಕ ಆಚರಣೆಗಳೆಡೆ ಅಸಂವೇದನೆಯನ್ನು ತೋರುವ ರಾಷ್ಟ್ರ – ನಿರ್ಮಾಣದ ಕೇಂದ್ರಿಕೃತ/ಏಕೀಕೃತ/ಏಕರೂಪಿತ ಕಲ್ಪನೆಯನ್ನು ಸೃಷ್ಟಿಸುವ ಇತ್ತೀಚೆಗೆ ಹೊರಹೊಮ್ಮುತ್ತಿರುವ ಧಾರ್ಮಿಕ ರಾಷ್ಟ್ರವಾದದ ಚರ್ಚೆಯನ್ನು ನೋಡಿ.

ಮೂರನೆಯದಾಗಿ, ನಾನು ಪ್ರಜ್ಞೆಯ ಸೈನ್ಯೀಕರಣ ಎಂದು ಪರಿಗಣಿಸುವುದರ ವೈಭವೀಕರಣ. ಸಹಾನುಭೂತಿ, ಕೇಳಿಸಿಕೊಳ್ಳುವ ಕಲೆ ಮತ್ತು ಸಹನೆಯನ್ನು 'ದೌರ್ಬಲ್ಯ' ಎಂದು ಪರಿಗಣಿಸುವುದು; ಅದಕ್ಕೆ ಬದಲಾಗಿ ಅತಿ-ಪೌರುಷದ ಆಕ್ರಮಣಶೀಲತೆಯನ್ನೊಳಗೊಂಡ 'ಕಠಿಣ' ನಿರ್ಧಾರಗಳನ್ನು ಮೆರೆಸುವುದು. ಯುದ್ಧ ಅಥವಾ 'ಸರ್ಜಿಕಲ್ ಆಕ್ರಮಣ' ಎಂಬ ರೂಪಕಗಳು ನಮ್ಮ ಪ್ರಜ್ಞೆಯ ಒಳಹೊಕ್ಕಿದೆ.

ಹಾಗಾಗಿ, ನಮ್ಮ ಇಂದಿನ ಕಾಲಮಾನದಲ್ಲಿ ಯಾರಾದರೂ ಸಾಮೂಹಿಕ ವಿಮೋಚನೆ ಅಥವಾ ರೂಢಿಗತ ಪದ್ಧತಿಗಳಿಂದ ಬಿಡುಗಡೆಯೆಡೆ ಶ್ರಮಿಸುತ್ತಿದ್ದರೆ ಈ ಮೂರು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು ಎಂದು ನಾನು ಹೇಳುವುದು ಸಮಂಜಸವಾಗುತ್ತದೆ.

1. ಮಾನಸಿಕವಾಗಿ/ಪರಿಸರಕ್ಕೆ ವಿನಾಶಕಾರಿಯಾದ ಕೊಳ್ಳುಬಾಕತನದ ಪಂಥದೊಡನೆ ಸಹಕರಿಸದೇ ಇರುವಂಥ ಧೈರ್ಯವುಳ್ಳ ಹೊಸ ಜೀವಿಯೊಂದನ್ನು ಮರುಕಲ್ಪನೆ ಮಾಡಿಕೊಳ್ಳಲು ಸಾಧ್ಯವೇ? ಹಾಗೂ ಪ್ರಕೃತಿ, ಪರಿಸರ ಮತ್ತು ಸಮುದಾಯದೊಡನೆ ಸಕಾರಾತ್ಮಕವಾಗಿ ಮತ್ತು ಸಾಮರಸ್ಯದಿಂದ ತೊಡಗಿಸಿಕೊಂಡು ಶಾಂತಿ ಹಾಗೂ ಸಂಯಮದ ಮೂಲದೆಡೆಗೆ ಚಲಿಸಲು ಸಾಧ್ಯವೇ?
2. ಧರ್ಮವನ್ನು ಉಗ್ರಗಾಮಿ ರಾಷ್ಟ್ರವಾದದ ಒಂದು ಸಿದ್ಧಾಂತವನ್ನಾಗಿ ನೋಡದೇ, ಧಾರ್ಮಿಕತೆಯನ್ನು ತಾನು ಮತ್ತು ಜಗತ್ತಿನ ನಡುವಿನ, ಜಾತ್ಯತೀತ ಮತ್ತು ನೈತಿಕ-ನೇಮಗಳ ನಡುವಿನ ಲಯಬದ್ಧವಾದ ಒಂದು ಸೇತುವನ್ನಾಗಿ ನೋಡಲು ಸಾಧ್ಯವೇ? ಇವೆಲ್ಲಕ್ಕೂ ಮೀರಿ, ಅದನ್ನು ಕ್ಷಿತಿಜಗಳ ನಡುವಿನ ಪ್ರೀತಿ ಮತ್ತು ಸಮ್ಮಿಲನದ ಒಂದು ಅನುಭವವನ್ನಾಗಿ ನೋಡಲು ಸಾಧ್ಯವೇ?
3. ಪಾಶವೀ ಬಲದ ಆ ಕ್ಷಣದ ಪ್ರಲೋಭನೆಗೆ ಒಳಗಾಗದೇ, ಧೈರ್ಯವನ್ನು ***ಅಹಿಂಸೆಯ*** ನೈತಿಕ ಬಲವನ್ನಾಗಿ - ಬಂಡಾಯಗಾರನನ್ನು ಉನ್ನತ ಮಟ್ಟದ ಒಂದು ಪ್ರಜ್ಞಾವಲಯಕ್ಕೆ ಕೊಂಡೊಯ್ದು, ಅದರಿಂದಾಗಿ ದಬ್ಬಾಳಿಕೆಗಾರನ ಆತ್ಮವನ್ನು ಮುಟ್ಟಲು ಯತ್ನಿಸುವ ಒಂದು ಪ್ರತಿಭಟನೆಯ ವಿಧಾನವನ್ನಾಗಿ ಮರುವ್ಯಾಖ್ಯಾನಿಸಬಹುದೇ? ಬೇರೆ ಪದಗಳಲ್ಲಿ ಹೇಳುವುದಾದರೆ, ಗೆರಿಲ್ಲಾ ಯುದ್ಧತಂತ್ರದಲ್ಲಿ ನುರಿತ ಒಬ್ಬ 'ಕ್ರಾಂತಿಕಾರಿ'ಯಾಗುವ ಬದಲು ಒಬ್ಬ ***ಸತ್ಯಾಗ್ರಹಿ***ಯಾಗಲು ಸಾಧ್ಯವೇ?

ಗಾಂಧಿಯೊಡನೆ ಅರ್ಥಪೂರ್ಣವಾದ ಒಂದು ಒಡನಾಟವು, ನನ್ನ ಪ್ರಕಾರ, ಯುವಜನತೆಯು ಈ ಮೂರು ಪ್ರಶ್ನೆಗಳಿಗೆ ಉತ್ತರಿಸಲು ಅನುವುಮಾಡಿಕೊಡುತ್ತದೆ.

## ಅರ್ಥಪೂರ್ಣವಾದ ಒಡನಾಟದ ಆರಂಭ

ನಾನು ಈ ಮೂರು ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಬರುವ ಮುಂಚೆ, ಗಾಂಧಿಯೊಡನೆಯ ಒಡನಾಟಕ್ಕೆ ಕೆಲವು ತಿಳುವಳಿಕೆಗಳ ಅಗತ್ಯವಿದೆ ಎಂದು ನಾನು ಹೇಳಲೇಬೇಕು. ಅವೆಂದರೆ, ಯಾವ ಚಿಂತಕನೂ

ಪರಿಪೂರ್ಣನಲ್ಲ, ಮತ್ತು ವೈರುಧ್ಯಗಳು ಮತ್ತು ಮೂರ್ಖತನಗಳು ಮನುಷ್ಯಸಹಜವಾದುದು ಎಂಬವು. ಗಾಂಧಿಗೆ ತಮ್ಮ ತಪ್ಪುಗಳು ಮತ್ತು ಎಡವಟ್ಟುಗಳ ಅರಿವಿತ್ತು ಮತ್ತು ಅವರು ಅವುಗಳನ್ನು ಸಂಪೂರ್ಣ ಪಾರದರ್ಶಕತೆಯಿಂದ ಒಪ್ಪಿಕೊಂಡಿದ್ದರು. ಇನ್ನೂ ಹೆಚ್ಚಿನದಾಗಿ, ನೀವು ಒಂದು ವೇಳೆ ಬಿ.ಆರ್. ಅಂಬೇಡ್ಕರ್ ಅವರನ್ನೋ, ಕಾರ್ಲ್ ಮಾರ್ಕ್ಸ್ ಅವರನ್ನೋ ಆರಾಧಿಸುತ್ತಿದ್ದರೂ ಗಾಂಧಿಯವರೊಡನೆ ಎಂದಿಗೂ ಒಡನಾಡಬಹುದು.

ಉದಾಹರಣೆಗೆ, ಜಾತಿಯ ಪ್ರಶ್ನೆಗೆ ಅಂಬೇಡ್ಕರ್ ಅವರಂತಲ್ಲದೆ, ಗಾಂಧಿಯವರ ಧೋರಣೆಯು 'ತೀವ್ರಗಾಮಿ' ಎನ್ನುವುದಕ್ಕಿಂತ ಕೊಂಚ ಮೃದು ಅಥವಾ 'ಸುಧಾರಣಾವಾದಿ' ಎಂದೇ ಹೇಳಬಹುದು. ತಮ್ಮ *ಅನಿಹಿಲೇಷನ್ ಆಫ್ ಕಾಸ್ಟ್* ಮತ್ತು *ಫಿಲಾಸಫಿ ಆಫ್ ಹಿಂದುಯಿಸಮ್* ಕೃತಿಗಳಲ್ಲಿ ಅಂಬೇಡ್ಕರ್ ಅವರು ಹಿಂದುತ್ವ, ಅದರ ಬ್ರಾಹ್ಮಣ ಗ್ರಂಥಗಳು, ಮತ್ತು ಶ್ರೇಣೀಕರಣೆಯ ತತ್ವ ಮತ್ತು ಈ ಧರ್ಮದಲ್ಲಿ ಅಡಕವಾಗಿರುವಂಥ ಬಹಿಷ್ಕರಣೆ (ಅಥವಾ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ನಿರಾಕರಣೆ) ಇವುಗಳ ಮೇಲೆ ತೀಕ್ಷ್ಣವಾದ ಟೀಕೆಗಳನ್ನು ಹೊಮ್ಮಿಸಿದರೆ, ಅವುಗಳ ಬಗ್ಗೆ ಗಾಂಧಿಯವರ ಧೋರಣೆ ಭಿನ್ನವಾಗಿದ್ದರೂ ಅತೀವವಾಗಿ ವಿಮೋಚನಕಾರಕವಾಗಿದ್ದವು – ಅದು ಅವರು ಉನ್ನತ ಶಿಕ್ಷಣಕ್ಕೋಸ್ಕರ ಇಂಗ್ಲೆಂಡಿಗೆ ಹೋಗಲು ನಿರ್ಧರಿಸಿದಾಗ ಜಾತಿಯಿಂದ 'ಬಹಿಷ್ಕೃತರೆಂದು' ನಿಂದಿತರಾದುದನ್ನು ಅರ್ಥಮಾಡಿಕೊಂಡ ಅನುಭವದಿಂದ ಹಿಡಿದು ದಕ್ಷಿಣ ಆಫ್ರಿಕಾದಲ್ಲಿ 'ಪುಸ್ತಕವೊಂದರ ಇಂದ್ರಜಾಲದ ಮಂತ್ರ' ಅವರನ್ನು ಜಾನ್ ರಸ್ಕಿನ್ ಅವರ 'ಶ್ರಮದ ಘನತೆ'ಯ ಹತ್ತಿರ ಕೊಂಡೊಯ್ದು ಗಮನಾರ್ಹ ಕ್ಷಣದವರೆಗೆ ಉಂಟಾದ ಸತತ ವಿಕಾಸವಾಗಿತ್ತು. ಮತ್ತು ಅದು, 1920ರ ಆರಂಭದಲ್ಲಿ ಅಸ್ಪೃಶ್ಯತೆಯು  ಹಿಂದುಧರ್ಮವು ತೊಡೆದು ಹಾಕಲೇಬೇಕಾದ ಗಂಭೀರವಾದ ನೈತಿಕ-ಆಧ್ಯಾತ್ಮಿಕ ಸಮಸ್ಯೆಯೆಂದು ಅವರಿಗೆ ಪ್ರಾಮಾಣಿಕವಾಗಿ ಅರಿವಾದಾಗಿನಿಂದ ಹಿಡಿದು, ಅಥವಾ 'ಪವಿತ್ರತೆ' ವಿರುದ್ಧ 'ಅಶುದ್ಧತೆ' ಹಾಗೂ 'ಬುದ್ಧಿ' ವಿರುದ್ಧ 'ಕಾರ್ಮಿಕ ಶ್ರಮ' ಎಂಬ ದ್ವಂದ್ವಗಳನ್ನು ಪ್ರಶ್ನಿಸಿದ ನಯಿ ತಾಲೀಮಿಗಾಗಿ ಅವರ ಮನವಿಯಿಂದ ಹಿಡಿದು ಸಮುದಾಯ ಜೀವನಕ್ಕೆ ದಾರಿ ಮಾಡಿಕೊಟ್ಟು, ಅಂತರ್ಜಾತಿ ಭೋಜನ, ಅಂತರ್ಜಾತಿ ವಿವಾಹಕ್ಕೆ ಅವರ ಮಾಡಿದ ಪ್ರಬಲವಾದ ಮನವಿಗೆ ಕಾರಣವಾದ ಆಶ್ರಮಗಳಲ್ಲಿ ನಡೆಸಿದ ಅವರ ಪ್ರಯೋಗಗಳವರೆಗಿನ ನಿರಂತರ ಬೆಳವಣಿಗೆಯಾಗಿದೆ.

ಪ್ರಾಯಶಃ ಮುಕ್ತ ಮನಸ್ಸಿನ ಯುವಜನರು - ಸಂವಾದವಿರದ ಅಸ್ಮಿತೆಯ ರಾಜಕೀಯವೊಂದರ ಉತ್ಪನ್ನವಾದ 'ಅಂಬೇಡ್ಕರ್ ವಿರುದ್ಧ ಗಾಂಧಿ' ಎಂಬ ದ್ವಂದ್ವದಾಚೆಗೆ ದೃಷ್ಟಿ ಹರಿಸಿ ಜಾತಿಯ ಪ್ರಶ್ನೆಯೊಡನೆ ಏಗಲು ಇರುವಂಥ ವಿಭಿನ್ನ ಹಾಗೂ ವಿವಿಧ ಮಾರ್ಗಗಳಿಗೆ ಮಹತ್ವ ಕೊಡುವುದು ಅಗತ್ಯವಾಗಿದೆ.

ಅದೇ ರೀತಿಯಾಗಿ, ಭಗತ್ ಸಿಂಗ್ ತಮ್ಮ ಉತ್ಸಾಹಭರಿತ ಕ್ರಾಂತಿಕಾರಿತ್ವದ ಹೊರತಾಗಿಯೂ ಬದಲಾಗಲು ಮತ್ತು ಅಚ್ಚರಿಗೊಳಿಸುವಷ್ಟು ವೈವಿಧ್ಯತೆಯನ್ನು ಹೊಂದಿರುವ ಒಂದು ದೇಶದಲ್ಲಿ ಸ್ವಾತಂತ್ರ್ಯ ಹಾಗೂ ವಸಾಹತುಮುಕ್ತಿಗಾಗಿ ನಡೆಯುವ ಜನಾಂದೋಲನವು, ಪುರುಷರು ಮತ್ತು ಮಹಿಳೆಯರು, ರೈತರು ಮತ್ತು ಬೂರ್ಶ್ವಾಗಳು (ಮಧ್ಯಮ ವರ್ಗದವರು), ಹಿಂದೂಗಳು ಮತ್ತು ಮುಸ್ಲಿಮರು — ಎಲ್ಲರ ಸಮೂಹ ಭಾಗವಹಿಸುವಿಕೆ ಇಲ್ಲದೆ ಹಾಗೂ ಬಹುಪಾಲು ಶಾಂತಿಪೂರ್ಣ ಪ್ರತಿರೋಧದ ಮಾರ್ಗವಿಲ್ಲದೆ ತನ್ನಷ್ಟಕ್ಕೆ ದೀರ್ಘಕಾಲ ಉಳಿಯಲು ಸಾಧ್ಯವಿಲ್ಲ ಎಂಬುದನ್ನು ಅರಿಯಲು ಪ್ರಾಯಶಃ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲಿಲ್ಲ ಎಂಬುದನ್ನು ನೆನಪಿಸಿಕೊಳ್ಳುವುದು ಮುಖ್ಯ.

ಹಾಗಾಗಿ, ಭಗತ್ ಸಿಂಗ್ ಅವರ ಹುತಾತ್ಮತೆಯನ್ನು ಗೌರವಿಸುವುದು ಹಾಗೂ ವಂದಿಸುವುದು ಎಂಬುದರ ಅರ್ಥ, ಗಾಂಧೀಜಿ ಅವರು ಮೂವತ್ತು ವರ್ಷಗಳ ಕಾಲ ಬೃಹತ್ ಆಲದ ಮರವೊಂದರಂತೆ ಇದ್ದು - ನೀಲಿ ಬೆಳೆಗಾರರು ಮತ್ತು ಬಟ್ಟೆ ಕಾರ್ಮಿಕರು, ಹರಿಜನರು ಮತ್ತು ಮಹಿಳೆಯರು, ರವೀಂದ್ರನಾಥ ಟಾಗೋರ್ ಅವರಂತಹ ಮಹಾನ್ ಚಿಂತಕರು ಹಾಗೂ ಜಿ.ಡಿ. ಬಿರ್ಲಾ ಅವರಂತಹ ಉದ್ಯಮಿಗಳನ್ನು – ಹೀಗೆ, ಎಲ್ಲರನ್ನೂ ತನ್ನೊಳಗೆ ಸೇರಿಸಿಕೊಂಡು —ಮಾಡಿದ ಕಾರ್ಯದ ಮೌಲ್ಯವನ್ನು ಕುಗ್ಗಿಸುತ್ತದೆ ಎಂದಲ್ಲ.ಬುದಲ್ಲ.

ಅದೇ ರೀತಿಯಾಗಿ, ಆಧುನಿಕ ಕೈಗಾರಿಕಾ ಬಂಡವಾಳಶಾಹಿಯ ಕುರಿತು ಅನೇಕ ಟೀಕೆಗಳಿವೆ. ಇತಿಹಾಸದಲ್ಲಿನ ವಿರೋಧಾಭಾಸಗಳನ್ನು ಅವಲೋಕಿಸಲು ಮಾರ್ಕ್ಸ್ ಬಳಸಿದ ದ್ವಂದ್ವಾತ್ಮಕ ಪ್ರಾಪಂಚಿಕತಾವಾದದ ವಿಧಾನ ಮಾರ್ಗ ಅತ್ಯಂತ ಅದ್ಭುತವಾಗಿತ್ತು; ಅದರ ಮೂಲಕ ಅವರು — ವಿಯೋಜಿತ ಕಾರ್ಮಿಕತೆ (ಏಲಿಯನೇಷನ್)ಯಿಂದ ವಸ್ತು ಪೂಜೆಯವರೆಗೆ — ಬಂಡವಾಳಶಾಹಿಯ ನೈತಿಕ ಸಂಕಟವನ್ನು ಸ್ಪಷ್ಟವಾಗಿ ಕಂಡರು. ಗಾಂಧೀಜಿ ಆಧುನಿಕತೆಯ ಕ್ರೂರ ಶಕ್ತಿಯನ್ನು, ಲಾಭಲಾಲಸೆ ಮತ್ತು ಆಸೆ ತೀವ್ರಗೊಳ್ಳುವುದರಿಂದ ಸಂಸ್ಕೃತಿ ಹಾಗೂ ಪರಿಸರ ಭರಿಸಬೇಕಾಗಿ ಬರುವ ಬೆಲೆಯನ್ನು, ಮತ್ತು 'ಯಂತ್ರಗಳು, ವೈದ್ಯರು, ವಕೀಲರು ಹಾಗೂ ನ್ಯಾಯಾಲಯಗಳ' ನಡುವೆಯೇ ಸಮುದಾಯದ ನೈತಿಕ ಶಕ್ತಿ ಕುಸಿಯುತ್ತಿರುವುದನ್ನು ಕಂಡರು.

ಆದ್ದರಿಂದ, ಆಧುನಿಕ ಬಂಡವಾಳಶಾಹಿಯ ಅತೃಪ್ತಿಗಳನ್ನು ನಿಜವಾದ ಪ್ರಾಮಾಣಿಕತೆಯಿಂದ ಅರಿತುಕೊಳ್ಳಲು ಬಯಸುವ ಯುವಕನೊಬ್ಬನು ಗಾಂಧಿ ಮತ್ತು ಮಾರ್ಕ್ಸ್ ಇಬ್ಬರೊಡನೆಯೂ ಸಂವಾದ ನಡೆಸಬೇಕೆಂದು ನನಗೆ ಅನಿಸುತ್ತದೆ.

**ಯುವಜನತೆ ಗಾಂಧಿಯೊಡನೆ ಪ್ರಯೋಗ ನಡೆಸಬಲ್ಲುದೇ?**

ನಾನು ಪ್ರಾರಂಭದಲ್ಲಿ ಎತ್ತಿದ ಮೂರು ಪ್ರಶ್ನೆಗಳಿಗೆ ಈ ಹಂತದಲ್ಲಿ ಮತ್ತೆ ಮರಳಬಹುದು. ಹೌದು, ನಾವು ಉಪಭೋಗವೇ ಹೊಸ ಮಂತ್ರವಾಗಿರುವ ಯುಗದಲ್ಲಿ ಬದುಕುತ್ತಿದ್ದೇವೆ. ಎಲ್ಲೆಡೆ ವ್ಯಾಪಿಸಿರುವ ಸಂಸ್ಕೃತಿ ಉದ್ಯಮವು ಮಾರುಕಟ್ಟೆಯಿಂದ ಪ್ರೇರಿತವಾದ ಹುಸಿ ಅವಶ್ಯಕತೆಗಳನ್ನು ಕಣ್ಣುಕೋರೈಸುವಂತೆ ಮಾಡಿ ನಮ್ಮ ಮುಂದೆ ಇಡುತ್ತದೆ; ಅವುಗಳು ನಮ್ಮ ಬದುಕಿನ ಜಗತ್ತನ್ನೇ ಆಕ್ರಮಿಸಿಕೊಂಡಂತೆ ತೋರುತ್ತದೆ.

ಉಲ್ರಿಚ್ ಬೆಕ್ ಅವರಂತಹ ಸಮಾಜಶಾಸ್ತ್ರಜ್ಞರು ವಾದಿಸುವಂತೆ, ಈ ಉಪಭೋಗ-ಕೇಂದ್ರಿತ ಅತಿ ಆಧುನಿಕತೆಯು ಹವಾಮಾನ ಬದಲಾವಣೆ, ಪರಿಸರ ವಿಪತ್ತುಗಳು ಹಾಗೂ ತಂತ್ರಜ್ಞಾನದಿಂದ ಉಂಟಾಗುವ ಹಿಂಸೆಯ ಭೀತಿಯಿಂದ ತುಂಬಿದ 'ಅಪಾಯಕ್ಕೊಡ್ಡಿಕೊಂಡ ಸಮಾಜ'ವನ್ನು ನಿರ್ಮಿಸಿದೆ. ಹಾಗೆಯೇ ಎರಿಕ್ ಫ್ರಾಂಮ್ ಮತ್ತು ಹರ್ಬರ್ಟ್ ಮಾರ್ಕ್ಯೂಸ್ ಅವರಂತಹ 'ನವ ಎಡಪಂಥೀಯ' ಚಿಂತಕರ ದೃಷ್ಟಿಯಲ್ಲಿ, ಅಸ್ತಿತ್ವದ ಈ 'ಎಲ್ಲವನ್ನೂ ಹೊಂದುವ'' ಜೀವನ ವಿಧಾನವು ಸಮಾಜ ನಿಯಂತ್ರಣದ ಹೊಸ ರೂಪವೊಂದನ್ನು ಹುಟ್ಟಿಸಿದೆ.

ಗಾಂಧೀಜಿಯವರು ಈ ಅಪಾಯದ ಸಾಧ್ಯತೆಯನ್ನು ಆಗಲೇ ಅನುಭವಿಸಿದ್ದರು ಎಂಬುದರ ಕುರಿತು ಯುವಜನರು ಆಲೋಚಿಸಬೇಕೆಂಬುದು ನನ್ನ ಒತ್ತಾಸೆ. ಅದಕ್ಕಾಗಿಯೇ ಸ್ವನಿಯಂತ್ರಣ, ಸರಳತೆ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಕಲೆಗೆ ಅವರು ಅತ್ಯಂತ ಮಹತ್ವ ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಬೇರೆ ಪರಿಹಾರ ಮಾರ್ಗವಿದ್ದಂತಿಲ್ಲ. ಗಾಂಧೀಜಿ ಅವರು ಮಧ್ಯಯುಗೀನ ವಿಚಾರದ ವ್ಯಕ್ತಿಯಾಗಿರಲಿಲ್ಲ. ಅದರ ಬದಲಾಗಿ, ಪರ್ಯಾಯ/ಪರಿಸರ ಸಂವೇದನಾಶೀಲ/ಶಾಂತಿಪೂರ್ಣ/ಸಹಸ್ವಾಮ್ಯ ಸಮುದಾಯದ ಜೀವನ ಶೈಲಿಯನ್ನು ತಮ್ಮದಾಗಿಸಿಕೊಳ್ಳಲು ಅವರು ನಮಗೆ ಪ್ರೇರಣೆ ನೀಡಬಲ್ಲರು. ಈ ರೀತಿಯ ಒಂದು ಅಸ್ತಿತ್ವ ಮಾತ್ರ 'ತಾಂತ್ರಿಕ–ಬಂಡವಾಳಶಾಹಿಯು 'ಉತ್ತಮ ಜೀವನ' ಎಂಬ ಹೆಸರಿನಲ್ಲಿ ನಮ್ಮನ್ನು ಮೋಹದ ರಾಜಕಾರಣದ ಮೂಲಕ ದಾಸ್ಯಕ್ಕೆ ಒಳಪಡಿಸುವುದನ್ನು ತಡೆಯಬಲ್ಲದು.

ಅದೇ ರೀತಿಯಾಗಿ, ಗಾಂಧೀಜಿ ಆಧ್ಯಾತ್ಮರಹಿತ ಜಾತ್ಯತೀತತೆಯಿಂದ ತೃಪ್ತರಾಗಿರಲಿಲ್ಲ. ಆದರೆ ಅವರ ಧಾರ್ಮಿಕತೆಯು ಪುರೋಹಿತಶಾಹಿಯ ಸಂಪ್ರದಾಯಿಕತೆಯನ್ನಾಗಲೀ ಅಥವಾ ಮೂಲಭೂತವಾದದ ಉಗ್ರತೆಯನ್ನಾಗಲೀ ಉತ್ತೇಜಿಸುವುದರಿಂದ ಬಹುದೂರವಾಗಿದ್ದು, ರಾಜಕೀಯದ ಕ್ರಿಯಾತ್ಮಕ ಕ್ಷೇತ್ರಕ್ಕೆ ಹೊಸ ಅರ್ಥವನ್ನು ನೀಡಿತು. ಗಾಂಧೀಜಿ ರಾಜಕೀಯವನ್ನು ತಮ್ಮ *ಸಾಧನೆಯ* ಕ್ಷೇತ್ರವನ್ನಾಗಿ ನೋಡುತ್ತಿದ್ದರು. *ಭಗವದ್ಗೀತೆಯ 'ನಿಷ್ಕಾಮ ಕರ್ಮ'* ಮತ್ತು 'ಸರ್ಮನ್ ಆನ್ ದ ಮೌಂಟ್'ನಲ್ಲಿ ಪ್ರತಿಬಿಂಬಿತಗೊಳ್ಳುವ ಪ್ರೀತಿಯ ಶಕ್ತಿಯೊಡನೆ ನಿರಂತರವಾಗಿ ತೊಡಗಿಸಿಕೊಂಡು, ಪ್ರಪಂಚದ ದೈನಂದಿನ ಆಗುಹೋಗುಗಳಿಗೆ ಅವರು ಉನ್ನತಾರ್ಥವನ್ನು ನೀಡಲು ಯತ್ನಿಸಿದರು.

ಧರ್ಮ-ಧರ್ಮಗಳ ನಡುವಿನ ಸಂವಾದ ಹಾಗೂ ಧಾರ್ಮಿಕತೆಯನ್ನು ಪ್ರೀತಿ ಮತ್ತು ದೃಷ್ಟಿಕೋಣಗಳ ಸಂಗಮವಾಗಿ ಅರ್ಥೈಸಿದ್ದರಿಂದ, ಸಂಘಟಿತ ಧರ್ಮಗಳ ಹೆಸರಿನಲ್ಲಿ ಹರಡಲಾಗುವ ವಿಭಜಕ ಕೋಮುವಾದ ಮತ್ತು ದ್ವೇಷದ ಸಿದ್ಧಾಂತಗಳನ್ನು ಎದುರಿಸಲು ಗಾಂಧೀಜಿಗೆ ನೈತಿಕ/ ರಾಜಕೀಯ/ ಮಾನಸಿಕ ಶಕ್ತಿ ದೊರೆತಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಅಂಬೇಡ್ಕರ್. ಬೌದ್ಧ ಧರ್ಮದ ಬಗ್ಗೆಯೂ ಮಾತನಾಡಿದರು. ಅವರ ಬೌದ್ಧ ಧರ್ಮವು ದಮನಕಾರಿ/ಬ್ರಾಹ್ಮಣವಾದಿ ಹಿಂದು ಧರ್ಮವನ್ನು ಕುರಿತ ಕ್ರೋಧಿತ ಪ್ರತಿಕ್ರಿಯೆಯಾಗಿದ್ದು, ಗಾಂಧಿಯವರ ಧಾರ್ಮಿಕತೆಯು ಕ್ರೋಧಕ್ಕಿಂತಲೂ ಹೆಚ್ಚಾಗಿ ಪ್ರೀತಿಯನ್ನು ಆಧರಿಸಿತ್ತು; ಅಂಬೇಡ್ಕರ್ ಅವರಂತಲ್ಲದೆ, ಹಿಂದುವಾಗಿದ್ದುಕೊಂಡೇ ಅದರ ಮಿತಿಗಳನ್ನು ಅವರು ದಾಟಬಲ್ಲವರಾಗಿದ್ದರು.

ಎಲ್ಲವನ್ನೂ ಸರಳೀಕರಿಸುವ ಮಾರ್ಕ್ಸ್‌ವಾದಿಗಳು ಸಂಘಟಿತ ಧರ್ಮಗಳು ಎಂಬ ಭ್ರಮಾತ್ಮಕ ಸ್ವರೂಪವನ್ನು ಮೀರಿ ನೋಡಲೇ ನಿರಾಕರಿಸಿದರೆ, ಗಾಂಧೀಜಿಗೆ ಧಾರ್ಮಿಕತೆಯನ್ನು ಪ್ರಾರ್ಥನೆ ಮತ್ತು ಪ್ರತಿರೋಧದ ಒಂದು ತತ್ತ್ವ ಹಾಗೂ ಆಚರಣೆಯಾಗಿ ಪರಿವರ್ತಿಸಲು ಸಾಧ್ಯವಾಯಿತು. ಸತ್ಯದ ಅನ್ವೇಷಣೆಯು ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ರಾಜಕೀಯವನ್ನು ಎದುರಿಸಲು ಗಾಂಧೀಜಿಗೆ ಅಗತ್ಯವಾದ ಆಧ್ಯಾತ್ಮಿಕ ಶಕ್ತಿಯನ್ನು ನೀಡಿತು. ಸಾವರ್ಕರ್ ಆಗಲಿ, ಜಿನ್ನಾ ಆಗಲಿ—ಇದನ್ನು ಅರಿಯಲಾಗದೆ ಹೋದರು.

ಕಟ್ಟಕಡೆಯಲ್ಲಿ, ಗಾಂಧೀಜಿ ಅವರು ತಾವು ತೊಡಗಿಸಿಕೊಂಡ ಧಾರ್ಮಿಕತೆಯಿಂದಾಗಿ ಅಹಿಂಸೆಗೆ ಸಕಾರಾತ್ಮಕ ಹಾಗೂ ಜೀವನ್ಮುಖಿಯಾದ ಅರ್ಥವನ್ನು ನೀಡಲು ಸಾಧ್ಯವಾಯಿತು. ಅದು ನ್ಯಾಯಕ್ಕಾಗಿ ನಡೆಯುವ ಹೋರಾಟದಿಂದ ತಪ್ಪಿಸಿಕೊಳ್ಳುವುದಾಗಿರಲಿಲ್ಲ, ಮತ್ತು ಹೇಡಿತನವೂ ಆಗಿರಲಿಲ್ಲ. ಅದರ ಬದಲಾಗಿ, ಅವರೇ ಪ್ರತ್ಯಕ್ಷವಾಗಿ ತೋರಿಸಿದಂತೆ, ಅದು ಆಂತರಿಕ ಮಂಥನದಿಂದ ಅಥವಾ 'ಆತ್ಮಬಲ'ದಿಂದ ಹುಟ್ಟುವ ಅತ್ಯುನ್ನತ ಮಟ್ಟದ ಧೈರ್ಯದ ರೂಪವಾಗಿದೆ.

ಆದ್ದರಿಂದ, *ಸತ್ಯಾಗ್ರಹ*ವು ನಿರಂತರ ಪರ್ಯಾಲೋಚನೆ, ಸ್ವಂತ ಅಂತರಂಗದ ಪ್ರಪಂಚದೊಳಗೆ ನಡೆಯುವ ಕಠಿಣ ಪರಿಶ್ರಮ ಹಾಗೂ ಪ್ರಾರ್ಥನೆಯಲ್ಲಿ ಪ್ರಾಮಾಣಿಕತೆಯನ್ನು ಬೇಡುವಂಥ ಪ್ರತಿರೋಧದ ಒಂದು ಮಾರ್ಗವಾಗಿದೆ. ದಬ್ಬಾಳಿಕೆ ನಡೆಸುವವನ 'ಕ್ರೂರ ಶಕ್ತಿಯನ್ನು' ತನ್ನೊಳಗೆ ಇಳಿಸಿಕೊಂಡು, ಅವನ ಆಟದಲ್ಲಿ ಅವನನ್ನೇ ಸೋಲಿಸಲು ಪ್ರಯತ್ನಿಸುವುದು ಸುಲಭವಾದರೂ, ಅಶೀಸ್ ನಂದಿಯವರ ಉಕ್ತಿಯನ್ನು ಬಳಸಿ ಹೇಳುವುದಾದರೆ, ಗಾಂಧೀಜಿಯವರು ಈ 'ಆಪ್ತ ಶತ್ರು'ವಿನ ಮಾರ್ಗವನ್ನು ಅನುಸರಿಸಲು ನಿರಾಕರಿಸಿದರು. ಅದರ ಬದಲಾಗಿ, ಕ್ರೂರ ಶಕ್ತಿಗೆ ಬದಲಾಗಿ ಆತ್ಮಶಕ್ತಿಯನ್ನೂ; ಅತಿ-ಪೌರುಷದ ಆಕ್ರಮಣಶೀಲತೆಗೆ ಬದಲಾಗಿ ಪ್ರೀತಿ, ಕಾಳಜಿ ಮತ್ತು ಪ್ರತಿರೋಧದ ನೈತಿಕತೆಯನ್ನೂ; ಮತ್ತು ಶತ್ರುವನ್ನು ಕೊಲ್ಲುವ ಪದ್ಧತಿಗೆ ಬದಲಾಗಿ ಸಾವಿಗೆ ಎದೆಯೊಡ್ಡುವ ಗಹನವಾದ ಒಂದು ಕಲೆಯನ್ನು ಪ್ರತಿಸ್ಥಾಪಿಸಲು ಅವರು ಯತ್ನಿಸಿದರು.

ಇಂದು ನಾವು ಹೆಚ್ಚುತ್ತಿರುವ ಸೈನ್ಯೀಕರಣ, ನಿಗಾ ವಹಿಸುವ ಯಂತ್ರವ್ಯವಸ್ಥೆ, ರಾಜ್ಯ-ಕೇಂದ್ರಿತ ಹಿಂಸೆ ಹಾಗೂ ಎಲ್ಲ ವಿಧದ 'ಭಯೋತ್ಪಾದಕ' ಅಥವಾ ಮುಕ್ತಿಯ ನಿಟ್ಟಿನ ಪ್ರತಿಹಿಂಸೆಯ ನಡುವೆ ಉಂಟಾದ ಅನಿವಾರ್ಯ ಮೈತ್ರಿಯ ಲಕ್ಷಣಗಳಿರುವ ಜಗತ್ತಿನಲ್ಲಿದ್ದೇವೆ.

ಅಣ್ವಸ್ತ್ರಗಳು ಮತ್ತು 'ಆತ್ಮಾಹುತಿ ಬಾಂಬರ್‌ಗಳ' ಈ ಲೋಕದಲ್ಲಿ ಹಿಂಸೆಯನ್ನು ಪುಷ್ಟೀಕರಿಸಿ ಅದೊಂದು ಸಾಮಾನ್ಯ ವಿಷಯವೆಂಬಂತೆ ನಡೆದುಕೊಳ್ಳುತ್ತಿರುವುದನ್ನು ನೋಡುತ್ತಿರುವಾಗ, ಹಿಂಸೆಯ ವಿಷವರ್ತುಲದೊಳಗೆ ಸಿಕ್ಕಿಬಿದ್ದಿದ್ದೇವೆ ಎಂಬ ಅರಿವು ನಮಗೆ ಮೂಡುತ್ತದೆ.

ಈ ವಿಷವರ್ತುಲವನ್ನು ಎಂದಾದರೂ ಭೇದಿಸಲು ಸಾಧ್ಯವೇ? ತಂತ್ರಜ್ಞಾನದ ಆಧಿಪತ್ಯದಲ್ಲಿದ್ದು ಪರಿಸರಕ್ಕೆ ವಿನಾಶಕಾರಿಯಾದ ಈ ಅಪಾಯಕಾರಿ ಸಮಾಜದಿಂದ ಹೊರಬರುವ ದಾರಿಯನ್ನು ಕಂಡುಕೊಳ್ಳಲು ಸಾಧ್ಯವೇ?

ಈ ಪ್ರಶ್ನೆಗಳಿಗೆ ನನ್ನ ಬಳಿ ಸುಲಭವಾದ ಉತ್ತರಗಳಿಲ್ಲ.

ಆದರೆ ಒಂದು ವಿಷಯ ನನಗೆ ಸಂಪೂರ್ಣ ಖಚಿತವಿದೆ. ನೀವು ಮತ್ತು ನಾನು — ಅಂದರೆ ಯುವಜನತೆಯು — ಈ ಪ್ರಶ್ನೆಗೆ ಸ್ಪಂದಿಸಲು ಎಂದಾದರೂ ಪ್ರಯತ್ನಿಸಬೇಕೆಂದರೆ, ಗಾಂಧಿಯೊಂದಿಗೆ ಒಡನಾಡಲೇಬೇಕು.

— *ಅವಿಜಿತ್ ಪಾಠಕ್ ಅವರು ಜೆಎನ್‌ಯುನಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ.*